ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE

# ಉಭಯ ಸದನಗಳಲ್ಲಿ ಶಿವಮೊಗ್ಗ ಸ್ಫೋಟ ಕದನ

## ನ್ಯಾಯಾಂಗ ತನಿಖೆ ನಡೆಸಲು ಕಾಂಗ್ರೆಸ್ ಒತ್ತಾಯ | ಸರ್ಕಾರ ನಿರಾಕಾರಣೆ | ಕಲಾಪ ಗದ್ದಲ, ಕಾಂಗ್ರೆಸ್‌ನಿಂದ ಸಭಾತ್ಯಾಗ

## ಹೈಕೋರ್ಟ್ ಹಾಲಿ ನ್ಯಾಯಾಧೀಶರು ತನಿಖೆ ಮಾಡಲಿ: ಸಿದ್ದು | ಕಂದಾಯ ಇಲಾಖೆ ಆಯುಕ್ತರಿಂದ ತನಿಖೆ: ಬೊಮ್ಮಾಯಿ

• ಕನ್ನಡಪ್ರಭ ವಾರ್ತೆ
ವಿಧಾನಸಭೆ / ವಿಧಾನಪರಿಷತ್

ಶಿವಮೊಗ್ಗದ ಹುಣಸೋಡು ಗ್ರಾಮದಲ್ಲಿ ಸಂಭವಿಸಿದ್ದ ಭೀಕರ ಸ್ಫೋಟ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಿ ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಕಾಂಗ್ರೆಸ್ ವಿಧಾನಮಂಡಲದ ಉಭಯ ಸದನಗಳಲ್ಲಿ ಒತ್ತಾಯಿಸಿದ್ದು, ನ್ಯಾಯಾಂಗ ತನಿಖೆಗೆ ವಹಿಸಲು ಸರ್ಕಾರ ನಿರಾಕರಿಸಿದ ಪರಿಣಾಮ ವಿಧಾನಸಭೆಯಿಂದ ಕಾಂಗ್ರೆಸ್ ಸಭಾತ್ಯಾಗ ಮಾಡಿತು.

ಸೋಮವಾರ ವಿಧಾನಸಭೆಯಲ್ಲಿ ನಿಯಮ 69ರ ಅಡಿ ಈ ತುರ್ತು ವಿಷಯವಾಗಿ ಅಲ್ಪ ಕಾಲದ ಚರ್ಚೆಗೆ ಹಾಗೂ ವಿಧಾನಪರಿಷತ್‌ನಲ್ಲಿ ನಿಯಮ 68ರ ಅಡಿ ಚರ್ಚೆಗೆ ಅವಕಾಶ ಕಲ್ಪಿಸಿಕೊಡಲಾಗಿತ್ತು.

ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಲಾರಿಯಲ್ಲಿಟ್ಟಿದ್ದ ಸ್ಫೋಟಕ ವಸ್ತುಗಳು





ಸ್ಫೋಟಗೊಂಡು ಆರು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಅಕ್ರಮವಾಗಿ ಸಂಗ್ರಹಿಸಲಾಗಿದ್ದ ಸುಮಾರು 1,350 ಕೆ.ಜಿ. ಜಿಲೆಟಿನ್ ಕಡ್ಡಿ, ಎಮಲ್ಷನ್, ಡಿಟೋನೇಟರ್‌ಗಳು ಸ್ಫೋಟಗೊಂಡಿವೆ. ಇದರಿಂದ 80 ಕಿ.ಮೀ. ದೂರದವರೆಗೆ ಭೂಕಂಪನದ ಅನುಭವ ಉಂಟಾಗಿದ್ದು, ಇದು ಪುಲ್ವಾಮಾ ಸ್ಫೋಟಕ್ಕಿಂತ ದೊಡ್ಡ ಸ್ಫೋಟ. ಪುಲ್ವಾಮಾ ದಾಳಿಯಲ್ಲಿ ಕೇವಲ 250 ಕೆ.ಜಿ. ಸ್ಫೋಟಕ ಬಳಸಲಾಗಿತ್ತು. ಹೀಗಾಗಿ ತಪ್ಪಿತಸ್ಥರ ಮೇಲೆ ಕೊಲೆ ಆರೋಪದ ಪ್ರಕರಣ ದಾಖಲಿಸಬೇಕು. ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳಿಂದ ನ್ಯಾಯಾಂಗ ತನಿಖೆಗೆ ವಹಿಸಬೇಕು ಎಂದು ಒತ್ತಾಯಿಸಿದರು.

**ಕಂದಾಯ ಆಯುಕ್ತರಿಂದ ತನಿಖೆ:** ಸರ್ಕಾರದ ಪರ ಉತ್ತರ ನೀಡಿದ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಅಕ್ರಮ ಗಣಿಗಾರಿಕೆ ಪ್ರಕರಣಗಳು ಇದೇ ಮೊದಲಲ್ಲ. 20 ವರ್ಷಗಳಿಂದಲೂ ಅಕ್ರಮಗಳು ನಡೆಯುತ್ತಿವೆ. ನಮ್ಮ ಸರ್ಕಾರದ ಅವಧಿಯಲ್ಲಿ ಅಕ್ರಮ ಗಣಿಗಾರಿಕೆ ಸಹಿಸುವ ಪ್ರಶ್ನೆಯೇ ಇಲ್ಲ. ಘಟನೆ ಬಗ್ಗೆ ಕಂದಾಯ ಇಲಾಖೆ ಆಯುಕ್ತರಿಂದ ಸಮಗ್ರ ತನಿಖೆ ನಡೆಸಲಾಗುವುದು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಿದ್ದರಾಮಯ್ಯ, ಅಕ್ರಮದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳ ಪಾತ್ರ ಇರುವುದರಿಂದ ಕಂದಾಯ ಇಲಾಖೆಯಿಂದ ತನಿಖೆ ಮಾಡುವುದು ಸೂಕ್ತವಲ್ಲ. ಸರ್ಕಾರ ನ್ಯಾಯಾಂಗ ತನಿಖೆಗೆ ವಹಿಸಬೇಕು ಎಂದು ಒತ್ತಾಯಿಸಿ ಪಕ್ಷದ ಸದಸ್ಯರೊಂದಿಗೆ ಸಭಾತ್ಯಾಗ ಮಾಡಿದರು. ಇದಕ್ಕೂ ಮೊದಲು ಸ್ಫೋಟ ಪ್ರಕರಣದ ಬಗ್ಗೆ ಚರ್ಚೆ ಅವಕಾಶ ನೀಡುವಂತೆಯೂ ಸದನದ ಬಾವಿಗಿಳಿದು ಕಾಂಗ್ರೆಸ್ ಸದಸ್ಯರು ಪ್ರತಿಭಟಿಸಿದ್ದರು.

### ದೇಶದ್ರೋಹಿಗಳ ಕೈಗೆ ಸಿಕ್ಕರೆ ಗತಿ?

### ಮೇಲ್ಮನೆಯಲ್ಲಿ ಎಸ್.ಆರ್.ಪಾಟೀಲ್ ಖಡಕ್ ಪ್ರಶ್ನೆ



ವಿಧಾನಪರಿಷತ್‌ನಲ್ಲಿ ಪ್ರತಿಪಕ್ಷ ನಾಯಕ ಎಸ್.ಆರ್. ಪಾಟೀಲ್, ಶಿವಮೊಗ್ಗದ ಹುಣಸೋಡು ಗ್ರಾಮದ ಬಳಿ ಇತ್ತೀಚೆಗೆ ನಡೆದ ಸ್ಫೋಟ ಘಟನೆ ಸಂಬಂಧ ಹೈಕೋರ್ಟ್ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು. ಸಿಎಂ ತವರು ಜಿಲ್ಲೆಯಲ್ಲಿ ಈ ರೀತಿ ನಡೆದರೆ ಉಳಿದ ಭಾಗಗಳಲ್ಲಿನ ಸ್ಥಿತಿ ಏನು? ಒಂದು ವೇಳೆ ಸ್ಫೋಟಕಗಳು ವಿಧ್ವಂಸಕ ಕೃತ್ಯ ನಡೆಸುವ ದೇಶದ್ರೋಹಿಗಳ ಕೈಗೆ ಸಿಕ್ಕರೆ ಗತಿ ಏನು ಎಂದು ಪ್ರಶ್ನಿಸಿದರು. 5 ವರ್ಷಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಸಿದ ಸಂಬಂಧ 2452 ಪ್ರಕರಣ ದಾಖಲಿಸಿ, 1126 ಪ್ರಕರಣಗಳಿಗೆ ಎಫ್ಐಆರ್ ದಾಖಲಿಸಲಾಗಿದೆ. ಉಳಿದ ಪ್ರಕರಣಗಳಲ್ಲಿ ಎಫ್ಐಆರ್ ದಾಖಲು ಮಾಡಿಲ್ಲ ಎಂದು ತರಾಟೆಗೆ ತೆಗೆದುಕೊಂಡರು. ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಮಾತನಾಡಿ, ಕೇವಲ ಕಲ್ಲು ಗಣಿಗಾರಿಕೆ ಉದ್ದೇಶದಿಂದ ಈ ಸ್ಫೋಟ ಆದಂತೆ ಕಾಣುತ್ತಿಲ್ಲ. ಮಹಾಸ್ಫೋಟಕ್ಕೆ ಯಾವುದೋ ದುರ್ಘಟನೆ ಮಾಡಲು ಹೊಂಚು ಹಾಕಿರುವಂತಿದೆ. ಹೈಕೋರ್ಟ್ ನ್ಯಾಯಮೂರ್ತಿ ಯೊಬ್ಬರಿಂದ ಪ್ರಕರಣದ ಕುರಿತು ತನಿಖೆ ಮಾಡಿಸಬೇಕೆಂಬ ಒತ್ತಾಯಕ್ಕೆ ತಾವು ಬದ್ಧ ಎಂದರು.